# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 19-12-2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು*

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ.ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು,
4. ಶ್ರೀ.ರಾಜೇಶ್, ಕಿರಿಯ ಆರೋಗ್ಯ ನಿರೀಕ್ಷಕರು,
5. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್,
6. ಶ್ರೀ ಉತ್ತಪ್ಪ, ಸದಸ್ಯರು (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು
7. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ),
8. ಶ್ರೀಮತಿ ಶೋಭಾ ಹಾಗೂ ಪ್ರಸನ್ನ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ) ರವರು

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಪುಟ್ಟಸ್ವಾಮಿ, ಸಹಾಯಕ ಅಭಿಯಂತರರು, ಬೆಸ್ಕಾಂ,
2. ಶ್ರೀ.ದವಲ್, ಸಹಾಯಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ),
3. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
4. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ,
5. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ,
6. ಶ್ರೀಮತಿ ಗೀತಾ, ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ.

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ರವರು ಮಾತನಾಡಿ, ಜಲವಾಯು ವಿಹಾರ್ ಸುತ್ತಲೂ ಗಿಡಗಳು ಬೆಳೆದು, ಗಿಡದ ರೆಂಬೆ ಕೊಂಬೆಗಳು ಪಾದಾಚಾರಿ ಮಾರ್ಗಕ್ಕೆ ಚಾಚಿಕೊಂಡಿದ್ದು, ಸಾರ್ವಜನಿಕರು ಪಾದಾಚಾರಿ ಮಾರ್ಗದಲ್ಲಿ ಸುಲಲಿತವಾಗಿ ಓಡಾಡಲು ಕಷ್ಟಕರವಾಗಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಇದನ್ನು ಕೂಲಂಕುಷವಾಗಿ ಚರ್ಚಿಸಿ, ಕೂಡಲೇ ಪಾದಾಚಾರಿ ಮಾರ್ಗದಲ್ಲಿ ಚಾಚಿಕೊಂಡಿರುವ ಗಿಡದ ಕೊಂಬೆ ರೆಂಬೆಗಳನ್ನು ಕೂಡಲೇ ಕತ್ತರಿಸಿ, ಟ್ರಿಮ್ ಮಾಡಿ, ಸಾರ್ವಜನಿಕರು ಪಾದಾಚಾರಿ ಮಾರ್ಗದಲ್ಲಿ ಸುಗಮವಾಗಿ ಓಡಾಡಲು ಅನುವು ಮಾಡಿಕೊಡಲು ಅರಣ್ಯ ಇಲಾಖೆಗೆ ಪತ್ರ ಬರೆಯಲು ಸಭೆಯು ಸರ್ವಾನುಮತದಿಂದ ಸೂಚಿಸಿತು.

2) ಶ್ರೀಮತಿ ಶೋಭಾ ಹಾಗೂ ಪ್ರಸನ್ನ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ) ರವರು ಮಾತನಾಡಿ, ಸರಸ್ವತಿ ರಸ್ತೆಯಲ್ಲಿ ಡಿ ಸಿಲ್ಟಿಂಗ್ ಮಾಡುವುದು ಹಾಗೂ ಕವರಿಂಗ್ ಸ್ಲಾಬ್ ಅನ್ನು ಅಳವಡಿಸಲು ಸಭೆಯ ಗಮನಕ್ಕೆ ತಂದಾಗ, ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ಸದರಿ

ರಸ್ತೆಯಲ್ಲಿ ಚರಂಡಿಯಲ್ಲಿ ಹೂಳು ತೆಗೆಯುವುದು, ಡೆಬ್ರೀಸ್ ತೆಗೆಯುವುದು ಮತ್ತು ಅವಶ್ಯವಿರುವ ಕಡೆಗಳಲ್ಲಿ ಕವರಿಂಗ್ ಸ್ಲಾಬ್ ಗಳನ್ನು ಅಳವಡಿಸಲು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

3) ಶ್ರೀಮತಿ ಶೋಭಾ ಹಾಗೂ ಪ್ರಸನ್ನ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ) ರವರು ಮಾತನಾಡಿ, ಹೆಚ್.ಬಿ.ಆರ್ ಬಡಾವಣೆಯಲ್ಲಿ ಖಾಲಿ ನಿವೇಶನಗಳಲ್ಲಿ ಸಾರ್ವಜನಿಕರು ಕಸ ಮತ್ತು ಅನುಪಯುಕ್ತ ವಸ್ತುಗಳನ್ನು ಎಸೆಯುತ್ತಿರುವುದರಿಂದ ವಾತಾವರಣ ಕಲುಷಿತಗೊಳ್ಳುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಕೂಲಂಕುಷವಾಗಿ ಚರ್ಚಿಸಿ, ಖಾಲಿ ನಿವೇಶನಗಳ ಮಾಲೀಕರಿಗೆ ತಿಳುವಳಿಕೆ ಪತ್ರ ನೀಡಲು ಖಾಲಿ ನಿವೇಶನಗಳ ಆಸ್ತಿ ಸಂಖ್ಯೆ ಹಾಗೂ ಮಾಲೀಕತ್ವದ ಬಗ್ಗೆ ಮಾಹಿತಿ ನೀಡಲು ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ಸಭೆಯು ಸರ್ವಾನುಮತದಿಂದ ಆದೇಶಿಸಿತು.

4) ಶ್ರೀ ಉತ್ತಪ್ಪ, ಸದಸ್ಯರು (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ವೈಜ್ಞಾನಿಕವಾಗಿ ರಸ್ತೆ ಹಂಪ್‌ಗಳನ್ನು ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಈ ಬಗ್ಗೆ ಚರ್ಚಿಸಲಾಗಿ, ವಾರ್ಡ್ ಪ್ರದೇಶದಲ್ಲಿ ಅವಶ್ಯವಿರುವ ಕಡೆ ವೈಜ್ಞಾನಿಕ ರಸ್ತೆ ಹಂಪ್‌ಗಳನ್ನು (HRPC) ಅಳವಡಿಸಲು ಈಗಾಗಲೇ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರಿಗೆ ಪತ್ರ ಬರೆದಿರುವುದಾಗಿ ಸಹಾಯಕ ಅಭಿಯಂತರರು, ಸಭೆಗೆ ತಿಳಿಸಿರುತ್ತಾರೆ.

5) ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ ರಾಮಯ್ಯ ಬಡಾವಣೆಯಲ್ಲಿ ಡೆಬ್ರೀಸ್ ಇದ್ದು, ಇದರ ಮೇಲೆ ಸಾರ್ವಜನಿಕರು ಕಸವನ್ನು ಸುರಿಯುತ್ತಿದ್ದು, ಇದು ಕಸದ ಗುಂಡಿಯಾಗುತ್ತಿರುತ್ತದೆ ಆದ್ದರಿಂದ ಕಸವನ್ನು ತೆರವುಗೊಳಿಸಿ, ಡೆಬ್ರೀಸ್ ಅನ್ನು ಸಾಗಾಣಿಕೆ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಈ ಬಗ್ಗೆ ಚರ್ಚಿಸಲಾಗಿ, ಆದ್ಯತೆ ಮೇರೆಗೆ ಡೆಬ್ರಿಸ್‌ಅನ್ನು ತೆರವುಗೊಳಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿರುತ್ತಾರೆ.

6) ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ರವರು ಮಾತನಾಡಿ, ಜಲವಾಯು ವಿಹಾರ್ ಪ್ರದೇಶದಲ್ಲಿ ಎರಡು ದಿನಗಳಿಂದ ಸಮರ್ಪಕ ನೀರು ಸರಬರಾಜು ಮಾಡಿರುವುದಿಲ್ಲವೆಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಜಲಮಂಡಳಿ ಸಹಾಯಕ ಅಭಿಯಂತರರು ಕೆಲವು ತಾಂತ್ರಿಕ ದೋಷಗಳಿಂದ ನೆಲಮಟ್ಟದ ಜಲಸಂಗ್ರಹಗಾರಕ್ಕೆ ನೀರು ಸಂಗ್ರಹವಾಗಿರುವುದಿಲ್ಲ. ಆದ್ದರಿಂದ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

7) ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ ರಾಮಯ್ಯ ಬಡಾವಣೆ, 2ನೇ ಜಿ ಅಡ್ಡರಸ್ತೆಯಲ್ಲಿ ನೀರು ಸರಬರಾಜು ಮಾಡಿದಾಗ, ಮನೆಗಳಿಂದ ಅಕ್ರಮವಾಗಿ ಪಂಪ್‌ಸೆಟ್‌ಗಳನ್ನು ಅಳವಡಿಸಿ, ನೀರು ಕದಿಯುತ್ತಾರೆ ಎಂದು ಸಭೆಯ ಗಮನಕ್ಕೆ ತಂದಾಗ, ಸಭೆಯಲ್ಲಿ ಹಾಜರಿದ್ದ ಜಲಮಂಡಳಿ ಸಹಾಯಕ ಅಭಿಯಂತರರು, ಈ ಬಗ್ಗೆ ವಿಶೇಷ ಗಮನ ಹರಿಸಿ, ಪರಿವೀಕ್ಷಣೆ ಮಾಡಲಾಗುವುದೆಂದು ಸಭೆಗೆ ಉತ್ತರಿಸಿದರು.

8) ಶ್ರೀಮತಿ ಶೋಭಾ ಹಾಗೂ ಪ್ರಸನ್ನ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ) ರವರು ಮಾತನಾಡಿ, ಹೆಚ್.ಬಿ.ಆರ್ ಲೇಔಟ್ 1ನೇ ಹಂತದಲ್ಲಿ ಪದೇ ಪದೇ ವಿದ್ಯುತ್ ಸರಬರಾಜು ಕಡಿತವಾಗುತ್ತಿರುವುದಾಗಿ, ಸಭೆಯಲ್ಲಿ ಪ್ರಸ್ತಾಪಿಸಿದಾಗ, ಈ ಬಗ್ಗೆ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ, ಸಹಾಯಕ ಅಭಿಯಂತರರು ಉತ್ತರಿಸಿ, ಇನ್ನು ಮೂರು ತಿಂಗಳುಗಳ ಒಳಗೆ ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ಪೂರ್ಣಗೊಳ್ಳಲಿದ್ದು, ನಂತರ ವಿದ್ಯುತ್ ಸರಬರಾಜನ್ನು ಕಡಿತಗೊಳಿಸದೇ ನಿರಂತರವಾಗಿ ಸರಬರಾಜು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

9) ಶ್ರೀಮತಿ ಶೋಭಾ ಹಾಗೂ ಪ್ರಸನ್ನ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ) ರವರು ಮಾತನಾಡಿ ರಾಮ ದೇವಸ್ಥಾನ ರಸ್ತೆಯಲ್ಲಿ ಪಾದಾಚಾರಿ ಮಾರ್ಗದಲ್ಲಿ ಸಣ್ಣಪುಟ್ಟ ವ್ಯಾಪಾರಸ್ಥರು ಅಂಗಡಿ ಮುಂಗಟ್ಟುಗಳನ್ನು ಇಟ್ಟು, ವ್ಯಾಪಾರ ವಹಿವಾಟು ಮಾಡುತ್ತಿರುತ್ತಾರೆ. ಇದರಿಂದ ಸಾರ್ವಜನಿಕರು ಪಾದಾಚಾರಿ ಮಾರ್ಗದಲ್ಲಿ ಓಡಾಡಲು ಕಷ್ಟಕರವಾಗಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ ಈ ಬಗ್ಗೆ ಚರ್ಚಿಸಲಾಗಿ, ಮಾನ್ಯ ಅಧ್ಯಕ್ಷರು ಮಾತನಾಡಿ ವಾರ್ಡ್ ಪ್ರದೇಶದ ಪ್ರಮುಖ ರಸ್ತೆಗಳಲ್ಲಿನ ಪಾದಾಚಾರಿ ಮಾರ್ಗಗಳ ಒತ್ತುವರಿಯನ್ನು ಪೊಲೀಸ್ ಇಲಾಖೆ ಸಹಯೋಗದೊಂದಿಗೆ ಕಾರ್ಯಾಚರಣೆ ಕೈಗೊಳ್ಳಲು ಆದೇಶಿಸಿದರು.

10) ಶ್ರೀ ಉತ್ತಪ್ಪ, ಸದಸ್ಯರು (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು ಮಾತನಾಡಿ, ಬೀದಿ ದೀಪಗಳು ಹಲವು ಕಡೆ ಉರಿಯುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಬೀದಿ ದೀಪಗಳ ವಿಭಾಗದ ಗುತ್ತಿಗೆದಾರರು ಉತ್ತರಿಸಿ, ಇತ್ತೀಚೆಗಷ್ಟೆ ಬೀದಿ ದೀಪಗಳ ದುರಸ್ತಿ ಕಾಮಗಾರಿಯ ಗುತ್ತಿಗೆಯನ್ನು ಪಡೆಯಲಾಗಿದ್ದು, ಆದ್ಯತೆ ಮೇರೆಗೆ ಇನ್ನು ಒಂದು ವಾರದ ಒಳಗೆ ಎಲ್ಲಾ ಬೀದಿ ದೀಪಗಳನ್ನು ದುರಸ್ತಿಪಡಿಸಲಾಗುವುದು ಎಂದು ಸಭೆಗೆ ತಿಳಿಸಿದರು.

11) ಶ್ರೀ ಉತ್ತಪ್ಪ, ಸದಸ್ಯರು (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು ಮಾತನಾಡಿ, ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ ಕೋವಿಡ್–19 ಬಗ್ಗೆ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರು, ವಾರ್ಡ್ ಸಂಖ್ಯೆ.29ರಲ್ಲಿ ಪ್ರಸ್ತುತ ಯಾವುದೇ ಕೋವಿಡ್ ಪ್ರಕರಣ ಕಂಡುಬಂದಿರುವುದಿಲ್ಲ ಎಂದು ಸಭೆಗೆ ತಿಳಿಸಿರುತ್ತಾರೆ.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

Prasanna Kumar A
ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

<u>ಪ್ರತಿಯನ್ನು</u>

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.